ದಿನಾಂಕ 17-12-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ವಾದಿಯ ಪರ ಶ್ರೀಮತಿ ಎಸ್ ಟಿ ಜೆ ವಕೀಲರಿಂದ ಶ್ರೀ ಆರ್ ವಿ ಡಬ್ಲ್ಯೂ ವಕೀಲರ ಪರವಾಗಿ:</u>**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಆಸ್ತಿ ನಂ. 2608 ರ ಕರ ನಿರ್ಧರಣಾ ಪಟ್ಟಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-1 ಎಂದು, ಆಸ್ತಿ ನಂ. 2609 ರ ಕರ ನಿರ್ಧರಣಾ ಪಟ್ಟಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-2 ಎಂದು, ಮುಖ್ಯಾಧಿಕಾರಿ ಹಾನಗಲ್ಲ, ಪುರಸಭೆ ಇವರು ನೀಡಿದ ಫಲಾನುಭವಿ ಆದೇಶವನ್ನು ಹಾಜರು ಮಾಡಿದ್ದು ಅದನ್ನು ನಿಪಿ-3 ಎಂದು, ಫಾರಂ ನಂ. 4 ನ್ನು ಹಾಜರು ಮಾಡಿದ್ದು ಅದನ್ನು ನಿಪಿ-4 ಎಂದು, ಅಸಲು ದಾವಾ ನಂ. 68/2001 ರಲ್ಲಿ ಆದ ತೀರ್ಪು ಮತ್ತು ಡಿಕ್ರಿಗಳ ಧೃಡಿಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕ್ರಮವಾಗಿ ನಿಪಿ-5 ಮತ್ತು ನಿಪಿ-6 ಎಂದು, ಸದರಿ ದಾವೆಯಲ್ಲಿ ಸಲ್ಲಿಸಿದ ಕೈ ನಕ್ಷೆಯ ಧೃಡೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:1 ರಿಂದ 7 ಹಾಗೂ 9 ಮತ್ತು 11 ನೇ ಪ್ರತಿವಾದಿಗಳ ಪರ ಶ್ರೀ ಎಫ್ ಬಿ ಎಂ ವಕೀಲರಿಂದ:</u>**

ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ:**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ